ತುಳುನಾಡಿನ ಗ್ರಾಮೀಣ ಸಮಾಜ: ಒಂದು ಚಾರಿತ್ರಿಕ ಅಧ್ಯಯನ
ಕ್ರಿ.ಶ. 1000ರಿಂದ ಕ್ರಿ.ಶ. 1500ರವರೆಗೆ

(ಮಂಗಳೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ: ಪದವಿಗಾಗಿ ಸಲ್ಲಿಸುತ್ತಿರುವ ಪ್ರಬಂಧದ ಅಂತಿಮ ಸಾರಲೇಖ)

ಚಂದ್ರಕಾಂತ್ ಭಟ್
ಸಂಶೋಧಕರು

ದಿನಾಂಕ: 12–05–2016

ಪ್ರೊ.ನಿರ್ಮಲ್ ರಾಜು
ಮಾರ್ಗದರ್ಶಕರು

ಇತಿಹಾಸ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ,

2024

ತುಳುನಾಡಿನ ಗ್ರಾಮೀಣ ಸಮಾಜ: ಒಂದು ಚಾರಿತ್ರಿಕ ಅಧ್ಯಯನ
ಕ್ರಿ.ಶ. 1000ರಿಂದ ಕ್ರಿ.ಶ. 1500ರವರೆಗೆ

ಪರಿವಿಡಿ

ಅಧ್ಯಾಯ: 1 ಪೀಠಿಕೆ: ಪ್ರಸ್ತಾವನೆ–ಅಧ್ಯಯನದ ಸ್ವರೂಪ–ಅಧ್ಯಯನದ ವ್ಯಾಪ್ತಿ –ಅಧ್ಯಯನದ ಮಹತ್ವ–ಇತಿಹಾಸ ಸಂಶೋಧನಾ ವಿಧಾನ – ಚಾರಿತ್ರಿಕ ಬರಹಗಳ ಸಮೀಕ್ಷೆ ಮತ್ತು ಆಧಾರ ಗ್ರಂಥಗಳ ಅವಲೋಕನ– ಆಕರಗಳು

ಅಧ್ಯಾಯ: 2 ತುಳುನಾಡಿನ ಚರಿತ್ರೆ ಮತ್ತು ಸಂಸ್ಕೃತಿಯ ಮೇಲೆ ಭೌಗೋಳಿಕ ಅಂಶಗಳ ಪ್ರಭಾವ

ಅಧ್ಯಾಯ: 3 ತುಳುನಾಡಿನಲ್ಲಿ ಪ್ರಭುತ್ವ ಮತ್ತು ಗ್ರಾಮೀಣ ಸಮಾಜದ ಆಡಳಿತಾತ್ಮಕ ಸಂಬಂಧಗಳು

ಅಧ್ಯಾಯ: 4 ತುಳುನಾಡಿನ ಗ್ರಾಮೀಣ ಸಮಾಜದ ಆರ್ಥಿಕ ಚಟುವಟಿಕೆಗಳು

ಅಧ್ಯಾಯ: 5 ತುಳುನಾಡಿನ ಧಾರ್ಮಿಕ ಆಚರಣೆಗಳು

ಅಧ್ಯಾಯ: 6 ತುಳುನಾಡಿನ ಸಾಮಾಜಿಕ ಜೀವನ

ಅಧ್ಯಾಯ: 7 ಊಳಿಗಮಾನ್ಯ ವ್ಯವಸ್ಥೆಯ ಹಿನ್ನೆಲೆಯಲ್ಲಿ ತುಳುನಾಡಿನ ಗ್ರಾಮೀಣ ಸಮಾಜದ ಸ್ವರೂಪ ಮತ್ತು ಮಹತ್ವ

ಅಧ್ಯಾಯ: 8 ಉಪಸಂಹಾರ

ಛಾಯಾಚಿತ್ರಗಳು

ಅನುಬಂಧಗಳು

ಭೂ ನಕ್ಷೆಗಳು

ತುಳುನಾಡಿನ ಗ್ರಾಮೀಣ ಸಮಾಜ: ಒಂದು ಚಾರಿತ್ರಿಕ ಅಧ್ಯಯನ
ಕ್ರಿ.ಶ. 1000ರಿಂದ ಕ್ರಿ.ಶ. 1500ರವರೆಗೆ

1.1 ಪ್ರಸ್ತಾವನೆ: ***'ವೈವಿಧ್ಯತೆಯಲ್ಲಿ ಏಕತೆ'*** ಇದು ಭಾರತೀಯ ಸಂಸ್ಕೃತಿಯ ಅನನ್ಯತೆ ಹಾಗೂ ಪ್ರಧಾನ ಲಕ್ಷಣವಾಗಿದೆ. ಅಂತೆಯೇ ತುಳುನಾಡಿನ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಗಳೂ ಸಹ ವೈವಿಧ್ಯಮಯವಾಗಿದ್ದು, ತುಳುನಾಡಿನ ಗ್ರಾಮೀಣ ಸಮಾಜದ ವೈಶಿಷ್ಟ್ಯತೆಯನ್ನು ಕುರಿತ ಅಧ್ಯಯನವು ಕರ್ನಾಟಕ ಮಾತ್ರವಲ್ಲ ಭಾರತದ ಇತಿಹಾಸದಲ್ಲಿ ಒಂದು ಪ್ರಮುಖ ಅಧ್ಯಾಯವಾಗಿದೆ. ಕರ್ನಾಟಕದ ಸಾಂಸ್ಕೃತಿಕ ಪರಿಕಲ್ಪನೆಯ ಚೌಕಟ್ಟಿನಲ್ಲಿ ಸ್ಥಳೀಯ ಹಾಗೂ ಪ್ರಾದೇಶಿಕ ವೈವಿಧ್ಯತೆಗಳನ್ನು ಗಮನದಲ್ಲಿರಿಸಿಕೊಂಡು ತುಳು ಸಂಸ್ಕೃತಿಯ ಮಹತ್ವವನ್ನು ವಿಶೇಷವಾಗಿ ತುಳುನಾಡಿನ ಗ್ರಾಮೀಣ ಸಮಾಜದ ಸ್ವರೂಪ ಹಾಗೂ ಅನನ್ಯತೆಯ ಹಿನ್ನೆಲೆಯಲ್ಲಿ ಗುರುತಿಸಲು ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.ಏಕೆಂದರೆ ಬಹುತ್ವದ ನೆಲೆಯಲ್ಲಿ ನಿರ್ಮಾಣಗೊಂಡಿರುವ ತುಳುನಾಡಿನ ಚರಿತ್ರೆಯನ್ನು ಬಹು ಸಾಂಸ್ಕೃತಿಕ ಶಿಸ್ತಿನಲ್ಲಿಯೇ ಅರ್ಥೈಸಿಕೊಳ್ಳಬೇಕಾಗಿದೆ.ತುಳುನಾಡಿನ ಗ್ರಾಮೀಣ ಸಮಾಜದ ಸ್ವರೂಪ, ಬೆಳವಣಿಗೆ ಮತ್ತು ವೈಶಿಷ್ಟತೆಯನ್ನು ತುಳುನಾಡಿನ ಸಮಗ್ರ ಸಾಮಾಜಿಕ ರಚನೆ ಮತ್ತು ಸಾಂಸ್ಕೃತಿಕ ಪರಂಪರೆಯೊಂದಿಗೆ ವಿಶ್ಲೇಷಣೆ ಮಾಡಬೇಕಾಗುತ್ತದೆ.ಏಕೆಂದರೆ ತುಳುನಾಡಿನ ಸಾಮಾಜಿಕ ರಚನೆ ಹಾಗೂ ಸಾಂಸ್ಕೃತಿಕ ಪರಂಪರೆಯ ಸಂಕೀರ್ಣತೆಯಲ್ಲಿ ಧಾರ್ಮಿಕ ಆಚರಣೆಗಳು ಮತ್ತು ರಾಜಕೀಯ ವ್ಯವಸ್ಥೆಗಳು ಪ್ರಭಾವಿ ಹಾಗೂ ನಿರ್ಣಾಯಕ ಶಕ್ತಿಗಳಾಗಿ ಕಾರ್ಯನಿರ್ವಹಿಸುವುದರಿಂದ ಈ ಅಂಶಗಳನ್ನು ಪ್ರಮುಖವಾಗಿ ಗಮನದಲ್ಲಿ ಇರಿಸಿಕೊಳ್ಳಬೇಕು.

ಪ್ರತಿ ಹಳ್ಳಿ ಹಾಗೂ ಗ್ರಾಮಗಳಲ್ಲಿ ಅಂತಹ ಸಭೆಗಳಿದ್ದವು. ಆದರೆ ಇದುವರೆಗೂ ಪ್ರಾದೇಶಿಕ ಅಥವಾ ಸ್ಥಳೀಯ ಆಡಳಿತದ ಈ ವೈಶಿಷ್ಟ್ಯವನ್ನು ಅರ್ಥೈಸಿಕೊಂಡಿರುವ ರೀತಿ ಮಾತ್ರ ಗೊಂದಲಗಳಿಂದ ಕೂಡಿದೆ.ಇದಕ್ಕೆ ಯುರೋಪ್ ಪ್ರಭಾವಿತ ಅಧ್ಯಯನ ವಿಧಾನ ಮತ್ತು ಅಧ್ಯಯನಕಾರರ ಮಡಿವಂತಿಕೆಯ ಮನೋಧರ್ಮಗಳೇ ಮೂಲ ಕಾರಣವೆನ್ನಬಹುದು.ಈ ಅಧ್ಯಯನ ವಿಧಾನಗಳಿಂದ ತುಳುನಾಡಿನ ಸಮಗ್ರ ಇತಿಹಾಸ ವಿಶೇಷವಾಗಿ ಗ್ರಾಮೀಣ ಸಮಾಜಗಳ ಅಧ್ಯಯನ ಸಾಧ್ಯವಿಲ್ಲ, ಇದರಿಂದ ಮೇಲ್ವರ್ಗದ ಅಥವಾ ಮೇಲ್ಸ್ತರದ ಚರಿತ್ರೆಯಷ್ಟೇ ಇದುವರೆಗೂ ರಚನೆಗೊಂಡಿತು. ತತ್ಪರಿಣಾಮವಾಗಿ ಜನಸಾಮಾನ್ಯರ ಅಥವಾ ಕೆಳಸ್ತರದ ಅಧ್ಯಯನವು ನಿರ್ಲಕ್ಷ್ಯ ಹಾಗೂ ತಾತ್ಸಾರ ನೀತಿಗೆ ಒಳಗಾಯಿತು. ತುಳುನಾಡಿನ ಸಮಗ್ರ ಚರಿತ್ರೆಯ ರಚನೆಯಲ್ಲಾದ ಈ ಅಸಮಾನತೆ ಹಾಗೂ ತಿರಸ್ಕಾರ ಮನೋಭಾವವನ್ನು ಹೋಗಲಾಡಿಸಲು ಈಗಾಗಲೇ ಒಪ್ಪಿಕೊಂಡಿರುವ ಚರಿತ್ರೆಯನ್ನು ಮರುವಿಮರ್ಶೆಗೆ

ಒಳಪಡಿಸುವ ಅವಶ್ಯಕತೆಯಿದೆ.ಈ ಗುರಿ ಸಾಧನೆಗಾಗಿ ಇನ್ನೂ ಖಚಿತತೆ ಇರದ ಆದಾಗ್ಯೂ ಹೊಸ ಮಾದರಿಯ ಚರಿತ್ರೆಯನ್ನು ರಚಿಸಲು ಸಹಾಯಕವಾಗುವ ಅಂಶಗಳನ್ನು ಅಡಗಿಸಿಕೊಂಡಿರುವ ಆಧಾರಗಳ ಅಧ್ಯಯನವನ್ನು ನಡೆಸುವ ಹೊಣೆಗಾರಿಕೆಯೂ ಇದೆ.

1.2 ಅಧ್ಯಯನದ ಸ್ವರೂಪ: ಪಶ್ಚಿಮ ಕರಾವಳಿ ಅಥವಾ ಅರಬ್ಬೀ ಸಮುದ್ರದ ದಡದ ಮೇಲಿರುವ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಪ್ರದೇಶಗಳು ಹಾಗೂ ಪ್ರಸ್ತುತ ಕೇರಳ ರಾಜ್ಯಕ್ಕೆ ಸೇರಿರುವ ಕಾಸರಗೋಡು ಜಿಲ್ಲೆಯನ್ನು ಒಳಗೊಂಡಿದ್ದ ತುಳುನಾಡು, ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಅಧ್ಯಯನದ ಸಂದರ್ಭದಲ್ಲಿ ಅತ್ಯಂತ ವೈಶಿಷ್ಟ್ಯಪೂರ್ಣವಾಗಿ ಹಾಗೂ ಭಿನ್ನವಾಗಿ ಕಂಡುಬರುತ್ತದೆ.ಈ ಭಿನ್ನತೆಗೆ ತುಳುನಾಡಿನ ಭೌಗೋಳಿಕ, ಭಾಷಿಕ ಹಾಗೂ ಸಾಂಸ್ಕೃತಿಕ ಪರಿಸರವೇ ಮೂಲ ಕಾರಣವೆನ್ನಬಹುದು. ದಟ್ಟ ಅರಣ್ಯಗಳಿಂದಾವೃತವಾದ ಪಶ್ಚಿಮಘಟ್ಟ ಶ್ರೇಣಿಗಳು, ಭೋರ್ಗರೆಯುವ ಅರಬ್ಬಿ ಸಮುದ್ರ, ಅಧಿಕವಾಗಿ ಬೀಳುವ ಮಳೆ, ರಭಸವಾಗಿ ಹರಿಯುವ ನದಿಗಳು, ಆರೋಗ್ಯಕರವಾದ ವಾಯುಗುಣ ಮುಂತಾದವು ತುಳುವರ ಬದುಕನ್ನು ಭಿನ್ನವಾಗಿಯೇ ರೂಪಿಸಿವೆ. ಪ್ರಕೃತಿಯೊಡ್ಡುವ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಕ್ರಿಯಾಶೀಲ ಮನಸ್ಸು ಈ ಹಿನ್ನೆಲೆಯಿಂದಲೇ ತುಳುವರಲ್ಲಿ ರೂಪುಗೊಂಡಿದೆ. ಆಹಾರ, ಉಡುಗೆ, ತೊಡುಗೆ, ಕೃಷಿ, ವ್ಯಾಪಾರ, ಭಾಷೆ,ಸಾಹಿತ್ಯ, ಸಾಮಾಜಿಕ ಗುಂಪು ಮತ್ತು ಸಮುದಾಯಗಳು, ಧಾರ್ಮಿಕ ಆಚರಣೆ ಹಾಗೂ ಆರಾಧನೆಗಳು ಇವುಗಳೆಲ್ಲದರಲ್ಲೂ ಸ್ವಂತಿಕೆಯನ್ನು ಉಳಿಸಿಕೊಳ್ಳುವುದರೊಂದಿಗೆ ಆಧುನಿಕ ಜಗತ್ತಿಗೆ ಮುಖಾಮುಖಿಯಾಗುವುದರಲ್ಲಿಯೂ

ಮುಂಚೂಣಿ ಯಲ್ಲಿರುವ ತುಳುನಾಡು ಸದಾ ಹೊಸತನ ಹಾಗೂ ವೈವಿಧ್ಯತೆಯೆಡೆಗೆ ಮುಖ ಮಾಡಿ ನಿಂತಿದೆ. ಈ ಹಿನ್ನೆಲೆಯಲ್ಲಿ ತುಳುನಾಡಿನ ಗ್ರಾಮೀಣ ಸಮಾಜದಲ್ಲಿ ಬಹುಮುಖ್ಯವಾಗಿ ಕಂಡುಬರುವ ಊಳಿಗಮಾನ್ಯ ವ್ಯವಸ್ಥೆಯನ್ನು ಕುರಿತು ಭಾರತೀಯ ಹಾಗೂ ಯುರೋಪಿನ ಊಳಿಗಮಾನ್ಯ ಸ್ವರೂಪಗಳ ತೌಲನಿಕ ಅಧ್ಯಯನದೊಂದಿಗೆ ಚರ್ಚಿಸಲಾಗಿದೆ.

1.3 ಅಧ್ಯಯನದ ವ್ಯಾಪ್ತಿ: ಪ್ರಸ್ತುತ ಅಧ್ಯಯನವನ್ನು ಕ್ರಿ.ಶ.100ದಿಂದ ಕ್ರಿ.ಶ.1500 ರವರೆಗೆ ತುಳುನಾಡಿನ ಗ್ರಾಮೀಣ ಪ್ರದೇಶಗಳ ಸಾಮಾಜಿಕ ವ್ಯವಸ್ಥೆಯ ಸಮಗ್ರ ಬೆಳವಣಿಗೆಯನ್ನು ವಿವರವಾಗಿ ಪರಿಶೀಲಿಸುವ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ. ಇತಿಹಾಸಕಾರರು ದೇಶದ ಇತಿಹಾಸವನ್ನು ಸಮಗ್ರವಾಗಿ ಅಧ್ಯಯನ ಮಾಡುವಾಗ ಪ್ರಾದೇಶಿಕ ವೈವಿಧ್ಯತೆ ಮತ್ತು ವೈಶಿಷ್ಟ್ಯತೆಗಳನ್ನು ಗಮನಿಸುವುದಿಲ್ಲ. ತುಳುನಾಡು ಪುರಾತತ್ವ ಮತ್ತು ಸಾಹಿತ್ಯಿಕವಾಗಿ ಸಂಪನ್ನವಾಗಿರುವುದರಿಂದ ಅನೇಕ ಐತಿಹಾಸಿಕ ಕೇಂದ್ರಗಳ ವಿಶೇಷವಾಗಿ ಗ್ರಾಮೀಣ ಸಮಾಜಗಳನ್ನು ಕುರಿತಂತೆ ಗಾಢವಾದ ಅಧ್ಯಯನವು ಸಮಗ್ರವಾಗಿ

ನಡೆಯಬೇಕಾಗಿದೆ. ಈ ಹಿನ್ನೆಲೆಯೊಂದಿಗೆ ಪ್ರಸ್ತುತ ಅಧ್ಯಯನವನ್ನು ಒಟ್ಟು ಎಂಟು ಅಧ್ಯಾಯಗಳಾಗಿ ವಿಭಾಗಿಸಿಕೊಂಡು ಚರ್ಚಿಸಲಾಗಿದೆ.

ಮೊದಲನೆಯ ಅಧ್ಯಾಯವು ಸಂಶೋಧನೆಯ ಸ್ವರೂಪ, ವ್ಯಾಪ್ತಿ, ಉದ್ದೇಶ, ಇದುವರೆಗೆ ನಡೆದಿರುವ ಅಧ್ಯಯನ ಮುಂತಾದವುಗಳನ್ನು ಒಳಗೊಂಡಿದೆ.ಮೂಲಾಧಾರಗಳು ಹಾಗೂ ಅನುಸರಿಸಿದ ಸಂಶೋಧನಾ ವಿಧಾನದ ಬಗ್ಗೆಯೂ ವಿವರಿಸಲಾಗಿದೆ.

ಎರಡನೆಯ ಅಧ್ಯಾಯವು ತುಳುನಾಡಿನ ಭೌಗೋಳಿಕ ವೈಶಿಷ್ಟ್ಯಗಳನ್ನು ಮಾನವ ಹಾಗೂ ಪ್ರಕೃತಿಯ ನಡುವಿನ ಸಂಬಂಧಗಳ ಹಿನ್ನೆಲೆಯಲ್ಲಿ ಅಧ್ಯಯನ ನಡೆಸುತ್ತದೆ.

ಅಧ್ಯಾಯ ಮೂರರಲ್ಲಿ ತುಳುನಾಡಿನ ಗ್ರಾಮೀಣ ಸಮಾಜದ ಸ್ವರೂಪದಲ್ಲಿ ರಾಜಕೀಯ ವ್ಯವಸ್ಥೆ ಹಾಗೂ ಪ್ರಾದೇಶಿಕ ಆಡಳಿತಾತ್ಮಕ ಸಂಬಂಧಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ತುಳುನಾಡಿನ ಗ್ರಾಮೀಣ ಸಮಾಜದ ಆರ್ಥಿಕ ಚಟುವಟಿಕೆಗಳನ್ನು ಕುರಿತು ಪ್ರಮುಖವಾಗಿ ಉಳಿಗಮಾನ್ಯ ವ್ಯವಸ್ಥೆಯನ್ನು ಅನ್ವಯಿಸಿ ಪರಿಶೀಲಿಸಲಾಗಿದೆ.

ಅಧ್ಯಾಯ ಐದರಲ್ಲಿ ತುಳುನಾಡಿನ ಗ್ರಾಮೀಣ ಸಮಾಜದ ಅಧ್ಯಯನದ ಹಿನ್ನೆಲೆಯಲ್ಲಿ ತುಳುನಾಡಿನ ಧಾರ್ಮಿಕ ನಂಬಿಕೆಗಳು, ಆಚರಣೆಗಳು, ಸಂಸ್ಕಾರಗಳು ಇತ್ಯಾದಿಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಆರರಲ್ಲಿ ತುಳುನಾಡಿನ ಗ್ರಾಮಗಳ ಸಾಮಾಜಿಕ ವ್ಯವಸ್ಥೆಯನ್ನು ಕುರಿತು ತುಳುನಾಡಿನ ಸಮಗ್ರ ಸಾಮಾಜಿಕ ವ್ಯವಸ್ಥೆಯ ಸಂರಚನೆ, ವಿಕಾಶ ಹಾಗೂ ಮಹತ್ವದ ಹಿನ್ನೆಲೆಯೊಂದಿಗೆ ವಿಶ್ಲೇಷಿಸಲಾಗಿದೆ.

ಅಧ್ಯಾಯ ಏಳರಲ್ಲಿ ಉಳಿಗಮಾನ್ಯ ವ್ಯವಸ್ಥೆಯ ಹಿನ್ನೆಲೆಯಲ್ಲಿ ತುಳುನಾಡಿನ ಗ್ರಾಮೀಣ ಸಮಾಜದ ಸ್ವರೂಪ, ವಿಕಾಶ, ಗ್ರಾಮಾಡಳಿತ ವ್ಯವಸ್ಥೆ ಮತ್ತು ವಿಶಿಷ್ಟತೆಗೆ ಸಂಬಂಧಿಸಿದಂತೆ ತುಳುನಾಡಿನ ಸಮಗ್ರ ರಾಜಕೀಯ ವ್ಯವಸ್ಥೆ ಮತ್ತು ಸ್ಥಳೀಯ ಆಡಳಿತ ಪದ್ದತಿಯೊಂದಿಗೆ ಚರ್ಚಿಸಲಾಗಿದೆ.

ಕೊನೆಯ ಅಧ್ಯಾಯದಲ್ಲಿ ಅಧ್ಯಯನದಿಂದ ಹೊರಹೊಮ್ಮಿದ ಫಲಿತಗಳನ್ನು ಉಪಸಂಹಾರದ ರೂಪದಲ್ಲಿ ಚರ್ಚಿಸಿ ಒಟ್ಟು ತಾತ್ಪರ್ಯವನ್ನು ನೀಡಲಾಗಿದೆ.ಅಂತಿಮವಾಗಿ ಅಧ್ಯಯನದ ಕೊನೆಯಲ್ಲಿ ಗ್ರಂಥ ಋಣ, ಸಂಬಂಧಿತ ಛಾಯಾಚಿತ್ರಗಳು, ಅನುಬಂಧಗಳು ಮತ್ತು ಭೂ ನಕ್ಷೆಗಳನ್ನು ಸಂಗ್ರಹಿಸಿ ಕೊಡಲಾಗಿದೆ.

1.4 ಅಧ್ಯಯನದ ಮಹತ್ವ: ಸ್ಥಳೀಯ ಇತಿಹಾಸದ ಉಪಯುಕ್ತತೆ, ಪ್ರಾಮುಖ್ಯತೆ ಹಾಗೂ ಮಹತ್ವತೆಯ ಹಿನ್ನೆಲೆಯಲ್ಲಿ ತುಳುನಾಡಿನ ಗ್ರಾಮೀಣ ಸಮಾಜದ ಸಮಗ್ರ ಅಧ್ಯಯನವನ್ನು ಕೈಗೆತ್ತಿ ಕೊಳ್ಳಲಾಗಿದೆ. ಪ್ರಾದೇಶಿಕ ಇತಿಹಾಸದ ಬಗೆಗಿನ ಆಸಕ್ತಿ, ಆ ಅಧ್ಯಯನದಲ್ಲಿ ಏನು ಮಾಡಬಹುದು, ಏನು ಮಾಡಬಾರದು, ಇವುಗಳಲ್ಲಿ ಎದುರಾಗುವ ಆಡಚಣೆ ಹಾಗೂ ತೊಂದರೆಗಳನ್ನು ಮುಖ್ಯವಾಗಿ ನಿವಾರಿಸಬೇಕೆಂಬುದೇ ಆಗಿದೆ. ಸ್ಥಳೀಯ ಅಧ್ಯಯನವನ್ನು ಕೈಗೊಳ್ಳುವವರು ಯಾವ ರೀತಿಯಾಗಿ ಸಿದ್ಧತೆ ಮಾಡಿಕೊಳ್ಳಬೇಕೆಂಬುದೇ ಮುಖ್ಯವಾದುದು. ಪ್ರಾದೇಶಿಕ ಇತಿಹಾಸದ ಅಧ್ಯಯನದಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಐತಿಹಾಸಿಕತೆಯಲ್ಲಿ ಯಾವುದು ಮಹತ್ವ ಎಂಬ ಅರಿವು, ಜ್ಞಾನ ಮತ್ತು ಸಮರ್ಥನೆ ಅವಶ್ಯಕವಾದುದು. ಇಂತಹ ಪ್ರಾದೇಶಿಕ ಇತಿಹಾಸದ ಅಧ್ಯಯನವು ಸ್ಥಳೀಯ ಮೌಲ್ಯ ಮತ್ತು ವಿಶೇಷತೆಗಳನ್ನು ಗೌರವಿಸಿ ಕಾಪಾಡಬೇಕೆಂಬುದನ್ನು ಸಮರ್ಥಿಸುತ್ತದೆ.ಪ್ರತಿಯೊಂದು ಪ್ರದೇಶವೂ ತನ್ನದೇ ಆದ ಚರಿತ್ರೆಯನ್ನು ಹೊಂದಿರುತ್ತದೆ.ಇದು ವಾಸ್ತವಿಕವಾಗಿ ಅಧ್ಯಯನಕ್ಕೆ ಮೊದಲ ಹೆಜ್ಜೆ. ಏಕೆಂದರೆ ಪುರಾತತ್ವೀಯ ಆಕರಗಳಾದ ಶಾಸನಗಳು, ಸ್ಮಾರಕಗಳು, ದೇವಾಲಯಗಳು, ಭೂಉತ್ಖನನಗಳು ಮತ್ತು ಸ್ಥಳಪುರಾಣಗಳು ಉಳಿದಿರುವ ಇತಿಹಾಸದ ಪಳೆಯುಳಿಕೆಗಳು.

ಇತಿಹಾಸ ಸಂಶೋಧನಾ ವಿಧಾನ: ಪ್ರಸ್ತುತ ಅಧ್ಯಯನದಲ್ಲಿ ಸಂಶೋಧನಾ ಮಾರ್ಗದ ತತ್ವಗಳನ್ನು ಅಳವಡಿಸಿಕೊಳ್ಳಲಾಗಿದೆ.ಇತಿಹಾಸ ಸಂಶೋಧನೆಯಲ್ಲಿ ಮಾರ್ಗದರ್ಶನ ಮಾಡುವುದಕ್ಕಾಗಿ ಇತಿಹಾಸ ಸಂಶೋಧನಾ ಮಾರ್ಗ ಎಂಬ ಒಂದು ಪ್ರತ್ಯೇಕವಾದ ಶಾಸ್ತ್ರವೇ ಬೆಳೆದುಬಂದಿದೆ.ಈ ಇತಿಹಾಸ ಸಂಶೋಧನಾ ಮಾರ್ಗದ ಸೂತ್ರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ವಿಷಯ ಆಯ್ಕೆ, ದತ್ತಾಂಶಗಳ ಸಂಗ್ರಹಣೆ, ಬಾಹ್ಯ ಮತ್ತು ಆಂತರಿಕ ವಿಮರ್ಶೆಯ ಸೂತ್ರಗಳು, ವಿಶ್ಲೇಷಣಾ ಕ್ರಮಗಳು, ಜೋಡಣಾ ವಿಧಾನ ಮತ್ತು ನಿರೂಪಣಾ ತತ್ವವನ್ನು ಪ್ರಸ್ತುತ ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ.

ಚಾರಿತ್ರಿಕ ಬರಹಗಳ ಸಮೀಕ್ಷೆ ಮತ್ತು ಆಧಾರ ಗ್ರಂಥಗಳ ಅವಲೋಕನ: ತುಳುನಾಡಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಗ್ರಹಿಸಿ ದಾಖಲಿಸಲು ದೊಡ್ಡ ಪ್ರಮಾಣದಲ್ಲಿ ವಿವಿಧ ರೀತಿಯ ಚರಿತ್ರೆಯ ಕಥನಗಳು ದೊರಕಿವೆ. ಹದಿನೆಂಟನೆ ಶತಮಾನದ ಅಂತ್ಯದಲ್ಲಿ ಮದ್ರಾಸ್ ಪ್ರೆಸಿಡೆನ್ಸಿಗೆ ಒಳಪಟ್ಟ ಕರ್ನಾಟಕದ ಪಶ್ಚಿಮ ಕರಾವಳಿ ಪ್ರಾಂತ್ಯಕ್ಕೆ ಮೊದಲ ಕಲೆಕ್ಟರ್ ಆಗಿ ನೇಮಕಗೊಂಡ ಸರ್ ಥಾಮಸ್ ಮುನ್ರೊ ಪ್ರಕಟಿಸಿದ ಬರವಣಿಗೆಗಳು ಬಹಳ ಮುಖ್ಯವಾಗಿವೆ. ಲೆಟರ್ಸ್ ಆಫ್ ಸರ್ ಥಾಮಸ್ ಮುನ್ರೊ ರಿಲೇಟಿಂಗ್ ಟು ದಿ ಅರ್ಲಿ ಅಡ್ಮಿನಿಸ್ಟ್ರೇಸನ್ ಆಫ್ ಕೆನರಾ 1799–1809 ಒಂದು ಉಪಯುಕ್ತವಾದ

ಚಾರಿತ್ರಿಕ ದಾಖಲೆಯಾಗಿದೆ.ಈ ದಾಖಲೆಯನ್ನು ಆಧರಿಸಿ ತುಳುನಾಡಿನ ಗತ ಇತಿಹಾಸವನ್ನು ಗ್ರಹಿಸಲು ಅನುಕೂಲವಾಗುತ್ತದೆ. ಭೂಹಿಡುವಳಿಗೆ ಸಂಬಂಧಿತ ಜಮಾಬಂಧಿ ವರದಿಗಳು ಮತ್ತು ಕಂಪನಿ ಅಧಿಕಾರಿಗಳ ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್ಸ್‌ಗಳು ಉಪಯುಕ್ತ ದಾಖಲೆಗಳಾಗಿವೆ. ಉದಾಹರಣೆಗೆ ಐಚಿನ್ಸನ್‌ರವರ ಎ ಕಲೆಕ್ಷನ್ ಆಫ್ ಟ್ರೀಟೀಸ್, ಎಂಗೇಜ್‌ಮೆಂಟ್ಸ್, ಸನ್ನದ್ಸ್ ರಿಲೇಟಿಂಗ್ ಟು ಇಂಡಿಯಾ ಅಂಡ್ ನೈಬರಿಂಗ್ ಕಂಟ್ರೀಸ್; ಎಚ್.ಎಂ.ಬ್ಲೇರ್‌ರವರ ರಿಪೋರ್ಟ್ ಆನ್ ದಿ ಜಮಾಬಂಧಿ ಆಫ್ ಕೆನರಾ ಫಾರ್ ದಿ ಪಸ್ಲೀಸ್ 1247 ಅಂಡ್ 1249; ರಿಪೋರ್ಟ್ ಆನ್ ದಿ ಮಾಡಿಫಿಕೇಶನ್ ಆಫ್ ಬ್ಯಾರಿಸ್ ಇನ್ ಕೆನರಾ; ಟಿ.ಎಲ್. ಬ್ಲೇನ್‌ರವರ ರಿಪೋರ್ಟ್ ಆನ್ ದಿ ಲ್ಯಾಂಡ್ ರೆವೆನ್ಯೂ ಸಿಸ್ಟಂ ಆಫ್ ಕೆನರಾ; ಎಚ್.ಎ.ಫ್ರಾನ್ಸಿಸ್ ಬುಕನನ್‌ರವರ ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್, ಕೆನರಾ ಅಂಡ್ ಮಲಬಾರ್ (ಮೂರು ಸಂಪುಟಗಳು); ಜಿ.ಎಫ್.ಎಸ್. ಕೋಲಿನ್ಸ್‌ರವರ ಇಂಟ್ರಡಕ್ಟರಿ ರಿಪೋರ್ಟ್ ಆನ್ ದಿ ರಿಸೆಟ್ಲ್‌ಮೆಂಟ್ ರಿಪೋರ್ಟ್ಸ್ ಆಫ್ ದಿ ಸಿರ್ಸಿ, ಸಿದ್ದಾಪುರ ಅಂಡ್ ಎಲ್ಲಾಪುರ ತಾಲೂಕ್ಸ್ ಅಂಡ್ ದಿ ಮುಂಡಗೋಡ್ ಮಹಲ್ ಆಫ್ ದಿ ಕೆನರಾ ಕಲೆಕ್ಟೋರೇಟ್; ಕರೆಸ್ಪಾಂಡೆನ್ಸ್ ಆನ್ ದಿ ಸಾವುಂತಾವಾರಿ ಡಿಸ್ಟರ್ಬೆನ್ಸ್ ಇನ್ ಕೆನರಾ 1845; ಡಬ್ಲ್ಯೂ.ಇ.ಹರ್ಟ್‌ರವರ ಸಂಪಾದಕತ್ವದಲ್ಲಿ ಪ್ರಕಟವಾದ ಬಾಂಬೆ ಹೈಕೋರ್ಟ್ ರಿಪೋರ್ಟ್ಸ್ (ಸಂಪುಟ 12); ಎಂ.ಲೆವಿನ್‌ರವರ ರಿಪೋರ್ಟ್ ಆನ್ ದಿ ಇನ್ಸರೆಕ್ಷನ್ಸ್ ರೈಸ್ಡ್ ಬೈ ಪುಟ್ಟಬಸಪ್ಪ ಅಂಡ್ ಅದರ್ಸ್ ಇನ್ ದಿ ಸೌತ್ ಕೆನರಾ ಡಿಸ್ಟ್ರಿಕ್ಟ್ 1837; ಮಾಲ್ಬಿ.ಇ ಮತ್ತು ಎಚ್.ಎಂ. ಬ್ಲೇರ್‌ರವರ ರಿಪೋರ್ಟ್ ಆನ್ ದಿ ಜಮಾಬಂದಿ ಆಫ್ ಕೆನರಾ ಫಾರ್ ಪಸ್ಲೀಸ್ 1248–1250; ರಿಪೋರ್ಟ್ ಆನ್ ದಿ ಲ್ಯಾಂಡ್ ಅಸೆಸ್‌ಮೆಂಟ್ ಅಂಡ್ ದಿ ಲ್ಯಾಂಡ್ ಟೆನ್ಯೂರ್ಸ್ ಆಫ್ ಕೆನರಾ; ರಿಪೋರ್ಟ್ಸ್ ಆನ್ ದಿ ಅಪ್ಪಾಯಿಂಟ್‌ಮೆಂಟ್ಸ್ ಹೆಲ್ಡ್ ಬೈ ಪಟೇಲ್ಸ್ ಅಂಡ್ ಶಾನುಬೋಗ್ಸ್ ಇನ್ ಕೆನರಾ 1815; ಸೆಲೆಕ್ಸ್‌ಸನ್ಸ್ ಫ್ರಂ ದಿ ರೆಕಾರ್ಡ್ ಆನ್ ದಿ ಕಲೆಕ್ಟರ್ ಆಫ್ ಸೌತ್ ಕೆನರಾ; ಜಾನ್ ಸ್ಟೋಕ್ಸ್ ರವರ ರಿಪೋರ್ಟ್ಸ್ ಆನ್ ದಿ ರಿವಿಶನ್ ಆಫ್ ಅಸೆಸ್‌ಮೆಂಟ್ ಅಂಡ್ ಆನ್ ದಿ ಡಿಸ್ಟರ್‌ಬೆನ್ಸಸ್ ನೋನ್ ಯಾಸ್ ಕೂಟ್ಸ್ ಇನ್ ಕೆನರಾ 1830–31; ಎಚ್.ವಿವಾಸ್‌ರವರ ರಿಪೋರ್ಟ್ ಆನ್ ದಿ ಜಮಾಬಂದಿ ಆಫ್ ಕೆನರಾ ಫಾರ್ ಪಸ್ಲೀಸ್ 1242–43 ಮತ್ತು 1244–45; ಮುಂತಾದ ವರದಿಗಳು ಪ್ರಮುಖ ಆಧಾರಗಳಾಗಿವೆ.

ಬಾಸೆಲ್ ಮಿಶಿನರಿಗಳಾದ ರೆವರೆಂಡ್ ಎ. ಬ್ರಿಜೆಲ್‌ರವರು ರಚಿಸಿದ ತುಳು ವ್ಯಾಕರಣ ಗ್ರಂಥ, ರೆವರೆಂಡ್ ಎ.ಮ್ಯಾನರ್ ರಚಿಸಿದ ತುಳು–ಇಂಗ್ಲೀಷ್ ನಿಘಂಟು ಮತ್ತು ರೆವರೆಂಡ್ ಕಿಟ್ಟೆಲ್‌ರವರು ರಚಿಸಿರುವ ಕನ್ನಡ–ಇಂಗ್ಲೀಷ್ ನಿಘಂಟು, ಬಿಷಪ್ ಕಾಡ್ವೆಲ್‌ರವರು ಕಂಪ್ಯಾರಿಟೀವ್ ಗ್ರಾಮರ್ ಆಫ್ ಡ್ರವಿಡಿಯನ್ ಲಾಂಗ್ವೇಜ್ ಎಂಬ ಕೃತಿಯನ್ನು ರಚಿಸಿ ತುಳು ಭಾಷೆಯು ಕೂಡ ಡ್ರಾವಿಡ ಭಾಷೆಗಳಲ್ಲಿ

ಒಂದೆಂದು ಗುರುತಿಸಿದರು. ಬರ್ನೆಲ್ ಮರಣದ ನಂತರ ಅವನು ಸಂಗ್ರಹಿಸಿದ್ದ ಎಲ್ಲಾ ಪಾಡ್ದನಗಳನ್ನು ಆರ್.ಸಿ.ಟೆಂಪಲ್‌ರವರು ಸಂಪಾದಿಸಿ 'ದಿ ಡೆವಿಲ್ ವರ್ಶಿಪ್ ಆಫ್ ದಿ ತುಳುವಾಸ್' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿಸಿದರು. ಈ ಎಲ್ಲಾ ಮಾಹಿತಿಗಳು ಇಂಡಿಯನ್ ಆಂಟಿಕ್ವೇರಿ ಪತ್ರಿಕೆಯ 23, 24, 25 ಮತ್ತು 26ನೆಯ ಸಂಚಿಕೆಯಲ್ಲಿ 1884ರಿಂದ 1892ರ ನಡುವಿನ ಅವಧಿಯಲ್ಲಿ ಭಾಗಭಾಗವಾಗಿ ಪ್ರಕಟವಾಗಿವೆ. ರೆವರೆಂಡ್ ಮ್ಯಾನರ್‌ನ 'ಪಾಡ್ದನೊಳು' ಎಂಬ ಕೃತಿಯಲ್ಲೂ ತುಳುನಾಡಿನ ದೈವಗಳನ್ನು ಕುರಿತು ಅನೇಕ ವಿವರಣೆಗಳಿವೆ. ರೆವರೆಂಡ್ ಮೊಗ್ಲಿಂಗ್ ಕೂಡ ಬಾಶೆಲ್ ಮಿಶನ್‌ನಲ್ಲಿ ಗುರುತಿಸಿಕೊಂಡಿದ್ದು, ಗೆಜೆಟಿಯರ್ ಆಫ್ ಕೂರ್ಗ್ ಎಂಬ ಗ್ರಂಥದಲ್ಲಿ ತುಳುನಾಡಿನ ದೈವಾರಾಧನೆಯ ಕುರಿತು ಸಮಗ್ರ ಮಾಹಿತಿ ನೀಡಿದ್ದಾನೆ. ಮದ್ರಾಸ್ ಪ್ರಾಂತದ ಬಿಷಪ್ ರೆವೆರೆಂಡ್ ವೈಟ್‌ಹೆಡ್ ರಚಿಸಿದ 'ವಿಲೇಜ್ ಗಾಡ್ಸ್ ಆಫ್ ಸೌತ್ ಇಂಡಿಯಾ' ಎಂಬ ಪುಸ್ತಕದಲ್ಲಿ ತುಳುನಾಡಿನ ಧಾರ್ಮಿಕ ಆಚರಣೆ ಮತ್ತು ದೈವಾರಾಧನೆಗಳನ್ನು ಕುರಿತು ಆಸಕ್ತಿದಾಯಕವಾದ ಮಾಹಿತಿಗಳಿವೆ.ಹೀಗೆ ವಸಾಹತುಶಾಹಿ ಅಧಿಕಾರಿಗಳು ಆಡಳಿತದ ಜೊತೆಗೆ ಸಂಗ್ರಹಿಸಿದ ಶಾಸನಗಳು, ತಯಾರಿಸಿದ ವರದಿಗಳು, ಪ್ರಕಟಿಸಿದ ಗ್ರಂಥಗಳು ತುಳುನಾಡಿನ ಭೌಗೋಳಿಕ ಲಕ್ಷಣಗಳು, ಜಾತಿ ಸಮುದಾಯಗಳು, ಜನರ ಭಾಷೆ, ಧಾರ್ಮಿಕ ನಂಬಿಕೆಗಳು, ಸಾಮಾಜಿಕ ಆಚರಣೆಗಳು, ಪ್ರಾದೇಶಿಕ ಸಂಘ ಸಂಸ್ಥೆಗಳು, ರಾಜಕೀಯ ವ್ಯವಸ್ಥೆಗಳನ್ನು ಗ್ರಹಿಸಿ ಅರ್ಥೈಯಿಸಿ ಮತ್ತು ಅವುಗಳನ್ನು ಪ್ರಕಟಿಸುವುದರಲ್ಲಿ ಮಿಶನರಿಗಳು ಯಶಸ್ವಿಯಾದರು. ಇದು ತುಳುನಾಡಿನ ಇತಿಹಾಸದ ರಚನೆಗೆ ಬಹಳ ಉಪಯುಕ್ತ ಹಾಗೂ ಅಭಿನಂದನಾರ್ಹ ಸಾಧನೆಯಾಗಿದೆ.

ತುಳುನಾಡಿಗೆ ಸಂಬಂಧಿಸಿದಂತೆ ದೇಶೀಯ ಪ್ರಕಾರದ ಚರಿತ್ರೆಯ ಕಥನವನ್ನು ಪ್ರತಿನಿಧಿಸುವ ಮೂರು ಕೃತಿಗಳನ್ನು ಉಲ್ಲೇಖಿಸಬಹುದು. ಪೊಳಲಿ ಶೀನಪ್ಪ ಹೆಗ್ಡೆಯವರ 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯರಾಯನ ಅಳಿಯಕಟ್ಟು' ತುಳುನಾಡಿನ ಇತಿಹಾಸಕ್ಕೆ ಸಂಬಂಧಿಸಿ ಸ್ಥಳೀಯ ವಿದ್ವಾಂಸರು ರಚಿಸಿದ ಮೊದಲ ಕೃತಿಯಾಗಿದ್ದು, 1919ರಲ್ಲಿ ಪ್ರಕಟವಾಯಿತು. ಎರಡನೆಯ ಕೃತಿ ಗಣಪತಿ ರಾವ್ ಐಗಳ್‌ರವರ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ' 1923ರಲ್ಲಿ ಪ್ರಕಟವಾಯಿತು.ಮೂರನೆಯದು ಬಾಬುರವರ 'ಬಾರಕೂರಿನ ಗತ ವೈಭವ', 1924ರಲ್ಲಿ ಪ್ರಕಟವಾಯಿತು.1948ರ ದಶಕದಲ್ಲಿ ತುಳು ಭಾಷೆ, ಸಾಹಿತ್ಯ, ಕಲೆ, ಮತ್ತು ಸಂಸ್ಕೃತಿಯ ಕುರಿತು ಆಳವಾಗಿ ಅಧ್ಯಯನ ಮಾಡಿದ ತುಳುನಾಡಿನ ಸಾಹಿತಿಗಳಲ್ಲಿ ಮಂಜೇಶ್ವರ ಗೋವಿಂದ ಪೈಯವರು, ಕೈಯಾರ ಕಿಂಜ್ಞಣ್ಣ ರೈ, ಪಿ.ಕೆ.ನಾರಾಯಣ ಪ್ರಮುಖರು. ಕಾರ್ಕಳ ಕೇಶವ ಕೃಷ್ಣ ಕುಡ್ವರು 1948ರಲ್ಲಿ ಪ್ರಕಟಿಸಿದ 'ದಕ್ಷಿಣ ಕನ್ನಡ ಇತಿಹಾಸ' ಎಂಬ ಕೃತಿಯು, ತುಳುನಾಡನ ಇತಿಹಾಸ ಮತ್ತು ಸಂಸ್ಕೃತಿಯ ಕುರಿತು ಸಮಗ್ರ ಚಿತ್ರಣವನ್ನು ನೀಡುವ ಕೃತಿಯಾಗಿದೆ.

ಚಾರಿತ್ರಿಕತೆಯ ಹೊಸ ಚಿಂತನೆ, ವಿಧಾನ, ವಿಮರ್ಶೆ ಹಾಗೂ ಮಾರ್ಗಗಳನ್ನು ಅಳವಡಿಸಿಕೊಂಡ ನವ ಪೀಳಿಗೆಯ ಇತಿಹಾಸಕಾರರಾದ ಬಿ.ಎ.ಸಾಲೆತ್ತೂರ್, ಕೆ.ವಿ.ರಮೇಶ್, ಗುರುರಾಜಭಟ್, ಬಿ.ಎಸ್.ಶಾಸ್ತ್ರಿ ಮತ್ತು ವಸಂತ ಮಾಧವ ಮುಂತಾದವರು ತುಳುನಾಡಿನ ಭಾಷೆ, ಸಂಸ್ಕೃತಿ, ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಇತಿಹಾಸ ಇತ್ಯಾದಿ ವಿಚಾರಗಳನ್ನು ಕುರಿತು ವಿಶ್ಲೇಷಣಾತ್ಮಕ ಅಧ್ಯಯನಗಳನ್ನು ನಡೆಸಿ ತುಳುನಾಡಿನ ಇತಿಹಾಸ ಕಥನಕ್ಕೆ ಹೊಸ ದಿಕ್ಸೂಚಿಯನ್ನು ತೋರಿದರು. ವೃತ್ತಿಪರ ಇತಿಹಾಸ ಸಂಶೋಧಕರಾದ ಭಾಸ್ಕರ್ ಆನಂದ ಸಾಲೇತ್ತೂರ್‌ರವರು ರಚಿಸಿದ ಸಂಶೋಧನಾ ಕೃತಿ ‘ಏನ್ಸಿಯೆಂಟ್ ಕರ್ನಾಟಕ: ಹಿಸ್ಟರಿ ಆಫ್ ತುಳುವಾಸ್’ ಪ್ರಮುಖ ಗ್ರಂಥ. 1936ರಲ್ಲಿ ಪ್ರಕಟವಾದ ಈ ಗ್ರಂಥ ತುಳುನಾಡಿನ ಇತಿಹಾಸ ಹಾಗೂ ಸಂಸ್ಕೃತಿ ಅಧ್ಯಯನಕ್ಕೆ ಇವತ್ತಿಗೂ ಪರಿಗಣಿಸಲ್ಪಡುವ ಒಂದು ಅಧಿಕೃತ ಸಂಶೋಧನಾ ಕೃತಿಯಾಗಿದೆ. ಇತಿಹಾಸ ಪ್ರಾಧ್ಯಾಪಕರಾಗಿ, ರಾಷ್ಟ್ರೀಯ ಪತ್ರಗಾರ ಇಲಾಖೆಯ ನಿರ್ದೇಶಕರಾಗಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಸಂಶೋಧನಾ ಸಂಸ್ಥೆಯ ಮುಖ್ಯಸ್ಥರಾಗಿ ಸಂಶೋಧನಾ ಕ್ಷೇತ್ರದಲ್ಲಿ ಪ್ರಕಟವಾಗಿರುವ ಎಲ್ಲಾ ಶಾಸನಗಳನ್ನು ಅಧ್ಯಯನ ಮಾಡಿ ನಿಖರವಾದ ತೀರ್ಮಾನಗಳನ್ನು ಪ್ರಕಟಿಸುವ ಪ್ರಯತ್ನ ಮಾಡಿದ್ದಾರೆ. ಆರು ಅಧ್ಯಾಯಗಳನ್ನೊಳಗೊಂಡ ಸಾಲೆತ್ತೂರ್‌ರವರ ಕೃತಿಯು 660 ಪುಟಗಳನ್ನು ಹೊಂದಿದೆ. ಪಾಡ್ದನಗಳೊಂದಿಗೆ ಸಾಹಿತ್ಯ ಕೃತಿಗಳಾದ ಗ್ರಾಮಪದ್ಧತಿ, ಸಹ್ಯಾದ್ರಿಖಂಡ ಮತ್ತು ಶಾಂತಿಪರ್ವ ಮುಂತಾದ ಕೃತಿಗಳಲ್ಲಿ ಉಲ್ಲೇಖವಾಗಿರುವ ವಿಚಾರಗಳೊಂದಿಗೆ ತುಳುನಾಡಿನ ಆರಂಭದ ಚರಿತ್ರೆಯನ್ನು ರಚಿಸಿದ್ದಾರೆ.

ಬಿ.ಎ.ಸಾಲೆತ್ತೂರ್‌ರವರಂತೆ ಕೆ.ವಿ.ರಮೇಶ್‌ರವರು ‘ಎ ಹಿಸ್ಟರಿ ಆಫ್ ಸೌತ್ ಕೆನರಾ’ ಎಂಬ ಕೃತಿಯನ್ನು 1970 ರಲ್ಲಿ ಪ್ರಕಟಿಸಿದರು.ಪಿಎಚ್.ಡಿ.ಮಹಾಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಈ ಅಧ್ಯಯನ ತುಳುನಾಡಿನ ಇತಿಹಾಸ ರಚನೆಗೆ ವಿಶೇಷ ಕೊಡುಗೆಯಾಗಿದೆ. ಬಿ.ಎ.ಸಾಲೆತ್ತೂರ್ ನಂತರ ಉಪಯುಕ್ತವಾದ ಅಧ್ಯಯನವಾಗಿ ಮೂಡಿಬಂದ ರಮೇಶರ ಕೃತಿ ಹಲವು ಕಾರಣಗಳಿಗೆ ವಿಶೇಷವಾದುದು. ತುಳುನಾಡಿನ ಇತಿಹಾಸ ಹಾಗೂ ಸಂಸ್ಕೃತಿ ರಚನೆಗೆ ಲಭ್ಯವಿರುವ ಎಲ್ಲಾ ಶಾಸನಾಧಾರಗಳನ್ನು ತಮಿಳು, ಸಂಸ್ಕೃತ ಮತ್ತು ಕನ್ನಡ ಭಾಷೆಯ ಸಾಹಿತ್ಯಾಧಾರಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಪುರಾತತ್ವ ಇಲಾಖೆಯಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದ ರಮೇಶ್‌ರವರು ಆ ಇಲಾಖೆ ಪ್ರಕಟಿಸಿರುವ ಎಲ್ಲಾ ಶಾಸನ ಸಂಪುಟಗಳನ್ನು ಸಂಪೂರ್ಣವಾಗಿ ಬಳಸಿಕೊಂಡರು. ಭಾಷೆಗಳ ಬಗ್ಗೆ ಹೆಚ್ಚಿನ ಪರಿಣಿತಿ ಇದ್ದುದರಿಂದ ಮತ್ತು ಚರಿತ್ರೆಯಲ್ಲಿ ವಸ್ತುನಿಷ್ಠತೆ ಪ್ರಮುಖವಾದುದೆಂಬ ಧೃಡನಂಬಿಕೆ ಇಟ್ಟುಕೊಂಡಿದ್ದ ರಮೇಶರವರು ಈ ಹಿಂದಿನ ಅಧ್ಯಯನಗಳಲ್ಲಿ

ಗ್ರಾಮಪದ್ಧತಿ ಮತ್ತು ಸಹ್ಯಾದ್ರಿಖಂಡ ಇತ್ಯಾದಿ ಸಾಹಿತ್ಯಾಧಾರಿತ ತುಳುನಾಡಿನ ಚರಿತ್ರೆಯ ರಚನೆಯನ್ನು ಅವರು ತಿರಸ್ಕರಿಸಿದರು.

ಡಾ.ಪಿ.ಗುರುರಾಜ ಭಟ್ಟರ 'ಎ ಪೊಲಿಟಿಕಲ್ ಅಂಡ್ ಕಲ್ಚುರಲ್ ಹಿಸ್ಟರಿ ಆಫ್ ತುಳುನಾಡು' ಎಂಬ ಪಿಎಚ್.ಡಿ, ಮಹಾಪ್ರಬಂಧವು 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್' ಎಂಬ ಶೀರ್ಷಿಕೆಯಲ್ಲಿ 1975ರಲ್ಲಿ ಪ್ರಕಟವಾಯಿತು.ತುಳುನಾಡಿನ ಎಲ್ಲಾ ರಾಜಮನೆತನಗಳ ಕುರಿತು ವಸ್ತುನಿಷ್ಠತೆಯಿಂದ ಅಧ್ಯಯನ ಮಾಡಿದ ಗುರುರಾಜ ಭಟ್ಟರು ಹೈದರಾಲಿ ಟಿಪ್ಪುಸುಲ್ತಾನರವರೆಗೆ ರಾಜಕೀಯ ಚರಿತ್ರೆಯನ್ನು ಮರು ನಿರೂಪಿಸುವ ಪ್ರಯತ್ನ ಮಾಡಿದ್ದಾರೆ. ಹೀಗೆ ಸಾಲೆತ್ತೂರ್, ಕೆ.ವಿ.ರಮೇಶ್ ಮತ್ತು ಗುರುರಾಜ ಭಟ್ಟರ ಗ್ರಂಥಗಳು ತುಳುನಾಡಿನ ಚರಿತ್ರೆ, ಸಂಸ್ಕೃತಿ, ವಾಸ್ತುಶಿಲ್ಪ, ಶಾಸನಗಳು ಮುಂತಾದವುಗಳನ್ನು ಆಧರಿಸಿ ಸಾಮಾಜಿಕ ವ್ಯವಸ್ಥೆ ಮತ್ತು ಧಾರ್ಮಿಕ ಪರಂಪರೆಗಳನ್ನು ಕುರಿತು ವಿವರಿಸಿದ್ದಾರೆ.

ಪ್ರಸ್ತುತ ತುಳುನಾಡಿನ ಚರಿತ್ರೆ ಮತ್ತು ಸಂಸ್ಕೃತಿಯನ್ನು ಕುರಿತು ಅನೇಕ ಕೃತಿಗಳು ಪ್ರಕಟವಾಗಿವೆ. ಅವುಗಳಲ್ಲಿ ಸಾವಿತ್ರಿಯವರ ನಂಬಿದ ಸತ್ಯಗಳು, ಅಮೃತ ಸೋಮೇಶ್ವರರವರ ತುಳು ಪಾಡ್ದನ ಸಂಪುಟ ಮತ್ತು ತುಳುವ ಜಾನಪದ: ಕೆಲವು ನೋಟಗಳು, ಮೋಹನ್ ಕೃಷ್ಣ ರೈಯವರ ತುಳು ಸಂಸ್ಕೃತಿ ಚತುರ್ಮುಖಿ ಅಧ್ಯಯನ, ಕೆನರಾ ವಿಭಜನೆ, ತುಳುನಾಡು ಕನ್ನಡನುಡಿ, ಶೈಲಾ ಟಿ. ವರ್ಮಾರವರ ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ; ಗಣೇಶ್ ಅಮೀನ್ ಸಂಕಮಾರ್ ಇವರ ಮಾಯ ಮತ್ತು ಜೋಗ; ಚಿನ್ನಪ್ಪ ಗೌಡರವರ ಸಂಸ್ಕೃತಿ ಸಿರಿ, ಮುದ್ದು ಮೂಡುಬೆಳ್ಳೆಯವರ ಜನಪದ ಅವಳಿ ವೀರರು: ಕಾಂತಬಾರೆ ಬೂದಬಾರೆ, ಬನ್ನಂಜೆ ಬಾಬೂ ಅಮೀನ್‌ರವರ ದೈವಗಳ ಮಡಿಲಲ್ಲಿ, ನುಡಿಕಟ್ ದೈವನೆಲೆ ಮತ್ತು ತುಳುನಾಡಿನ ದೈವಗಳು, ಕೇಶವ ಬಂಗೇರರವರ ತುಳುನಾಡಿನ ಕಾರ್ಣಿಕ ದೈವೊಲು, ದೇವರಕೊಂಡ ರೆಡ್ಡಿ ಮತ್ತು ಜಯಪ್ರಕಾಶ್ ಮಾವಿನಕುಳಿ ಅವರ ಸಂಪಾದಕತ್ವದಲ್ಲಿ ಪ್ರಕಟವಾದ ತುಳುನಾಡಿನ ಜೈನ ಶಾಸನಗಳು, ಪೂವಪ್ಪ ಕಣಿಯೂರುರವರ ಮೌಖಿಕ ಸಂಕಥನ, ಕೆ.ಎಸ್.ಎನ್.ಉಡುಪರ ಶ್ರೀಕ್ಷೇತ್ರ ಕೋಟೇಶ್ವರ, ಸುಬ್ಬಣ್ಣ ರೈಯವರ ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಶಾರದ ಕಾಲೇಜು ಬಸ್ರೂರು ಪ್ರಕಟಿಸಿದ ಹೆಸರಾದ ಪಟ್ಟಣ ಬಸ್ರೂರು ಒಂದು ಅಧ್ಯಯನ, ಇಂದಿರಾ ಹೆಗ್ಗಡೆಯವರ ತುಳುವರ ಮೂಲತಾಣ ಆದಿ ಆಲಡೆ, ಬಿ.ಎಂ.ರೋಹಿಣಿ ಮತ್ತು ಶಶಿರೇಖಾರವರ ತುಳುನಾಡಿನ ಮಾಸ್ತಿಕಲ್ಲುಗಳು ಮತ್ತು ವೀರಕಲ್ಲುಗಳು, ಕೃಷ್ಣಭಟ್ಟರ ಸಂಪಾದಕತ್ವದಲ್ಲಿ ಪ್ರಕಟವಾದ ತುಳು ಅರಸು ಮನೆತನಗಳು ಇವುಗಳು ತುಳುನಾಡಿನ ಚರಿತ್ರೆ ಹಾಗೂ ಸಂಸ್ಕೃತಿ ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಗಳನ್ನು ನೀಡುತ್ತವೆ.

ಶಾಸನಗಳ ಅಧ್ಯಯನದಂತೆ ತುಳುನಾಡಿನಲ್ಲಿ ಹಲವು ಭೂಸಂಶೋಧನೆಗಳು ನಡೆದಿವೆ. ನಾಣ್ಯಗಳು ಲಭ್ಯವಾಗಿವೆ. ಅಪಾರವಾಗಿ ಸ್ಮಾರಕಗಳು ಸಹ ತಲೆಯೆತ್ತಿ ನಿಂತಿವೆ. ಈ ಎಲ್ಲಾ ಪುರಾತತ್ವೀಯ ಆಕರಗಳು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಮೊದಲಾದ ಎಲ್ಲಾ ಸಾಂಸ್ಕೃತಿಕ ಕ್ಷೇತ್ರಗಳ ಮೇಲೂ ಬೆಳಕು ಚೆಲ್ಲುತ್ತವೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾನವಿಕ ವಿಷಯಗಳ ತಜ್ಞರನ್ನು ಸಂಪರ್ಕಿಸಿ ಅವರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಸಹ ಪಡೆದುಕೊಳ್ಳಲಾಗಿದೆ.ಇತಿಹಾಸ ರಚನೆಗೆ ಶಾಸ್ತ್ರೀಯವಾದ ಸಾಹಿತ್ಯಾಧಾರಗಳು ಮತ್ತು ಪುರಾತತ್ವೀಯ ಆಧಾರಗಳಂತೆ ಮೌಖಿಕ ಪರಂಪರೆಯು ಸಹ ಪ್ರಮುಖವಾಗಿದೆ. ಈ ಹಿನ್ನೆಲೆಯಲ್ಲಿ ತುಳುನಾಡಿನಲ್ಲಿ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹರಿದು ಬಂದ ಪಾಡ್ದನಗಳು ಸಹ ಇತಿಹಾಸ ಕಟ್ಟುವ ಅಪೂರ್ವ ದಾಖಲೆಗಳಾಗುತ್ತವೆ.

ತುಳುನಾಡಿನ ಗ್ರಾಮ ಸಮಾಜದಲ್ಲಿ ಹೊಸದಾಗಿ ರೂಪುಗೊಂಡ ವ್ಯವಸ್ಥೆಗೆ ಅಧಿಕಾರ ಮತ್ತು ಗೌರವವನ್ನು ಸಂಪಾದಿಸಲು ಭೂತಾರಾಧನೆ ವೇದಿಕೆಯಾಯಿತು.ಬಹುತೇಕ ಒಕ್ಕಲುಗಳು ಸ್ವಂತ ಭೂಮಿಯನ್ನು ಹೊಂದಿ, ಹಿಂದಿನ ಭೂಮಾಲೀಕರಿಗೆ ಸರಿಸಮನಾಗಿ ಕುಳಿತು ಭೂತದ ನೇಮ ನೋಡುವ ಪ್ರೇಕ್ಷಕರಾದರು.ಕೆಲವೊಂದು ಭೂತಗಳ ಆಚರಣೆಯ ಸಂದರ್ಭದಲ್ಲಿ ಅವರು ಮಾಡಬೇಕಾದ ಕೆಲಸವನ್ನು ಮೊದಲೇ ಸೂಚಿಸಲಾಗಿರುತ್ತದೆ.ಇಂತಹ ಕಟ್ಟುಪಾಡುಗಳಲ್ಲಿ ಯಾವ ರೀತಿಯ ಬದಲಾಣೆಯೂ ಆಗಿಲ್ಲ.

ತುಳುನಾಡಿನ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಇತ್ತೀಚೆಗೆ ಹೊಸಹೊಸ ಆಲೋಚನೆಗಳನ್ನೊಳಗೊಂಡ ಗ್ರಂಥಗಳು ಪ್ರಕಟವಾಗುತ್ತಿವೆ. ನಿದರ್ಶನಕ್ಕೆ ಧರ್ಮಸ್ಥಳದಲ್ಲಿ ನಡೆಯುತ್ತಿರುವ ತುಳು ಸಮ್ಮೇಳನದಲ್ಲಿ ತುಳು ಗ್ರಾಮಗಳ ಕುರಿತು ಪ್ರಕಟಿಸಿದ ಪ್ರಾತ್ಯಕ್ಷಿತೆಯಲ್ಲಿ ತುಳುಗ್ರಾಮ ಎಂದರೆ ಕೇವಲ ಉಳ್ಳವರ ಬೀಡಲ್ಲ; ಅದೊಂದು ಸಾಂಸ್ಕೃತಿಕ ಜಗತ್ತು ಎಂಬ ಕಲ್ಪನೆಯೊಂದಿಗೆ ಪ್ರಾಚೀನ ಕಾಲದಲ್ಲಿ ತುಳು ಸಮಾಜ ಹೇಗಿತ್ತು ಎಂಬುದನ್ನು ಸಾರ್ವಜನಿಕರಿಗೆ ಪರಿಚಯಿಸಲಾಗುತ್ತಿದೆ. ಈ ಗ್ರಾಮದೊಳಗೆ ಬ್ರಾಹ್ಮಣರು, ವೈಶ್ಯರು ಅಥವಾ ವ್ಯಾಪಾರಿಗಳು, ಕೃಷಿಯಲ್ಲಿ ತೊಡಗಿಸಿಕೊಂಡ ಭೂಮಾಲೀಕರು, ಕೃಷಿ ಕೂಲಿಯಾಳುಗಳು, ಕಂಬಳದ ಕಲ್ಪನೆ, ಭೂತಾರಾಧನೆಯ ಚಹರೆ, ಪಾಡ್ದನ ಹಾಡುವ ಗುಂಪು, ಕೋಲ ಕಟ್ಟುವ ಜನ, ಚಿನ್ನದ ಕೆಲಸ ಮಾಡುವ ಚಿನಿವಾರ, ಮರದ ಕೆಲಸ ಮಾಡುವ ಬಡಗಿ, ದೇವಸ್ಥಾನ ಕಟ್ಟುವ ಶಿಲ್ಪಿಗಳು ಇತ್ಯಾದಿ ಕಾಯಕ ಸಮುದಾಯಗಳ ವಿಚಾರಗಳು ಪ್ರಕಟವಾಗುತ್ತಿವೆ. ಅಂದರೆ ಇದೊಂದು ತುಳು ಸಮಾಜದ ಪರಿಕಲ್ಪನೆಯಾಗಿದೆ.

Bibliography

I. Books in English

1. *Gleig, 1831,The Life of Major Thomas Munro, London.*

2. Francis Buchanan, *1870, A Journey from Madras through the countries of Mysore, Canara and Malabar, Madras.*

3. *Miley, 1875, Canara: Past and Present,* Mangalore.

4. Samuel Miley, 1875, *South Kanara: Past and Present*, Madras.

5. A. R. Disney, 1886, *Twilight of the Pepper Empire: Portuguese Trade in the Early Seventeenth Century, Cantale*.

6. Alexander Arbuthot (ed), 1886, *Sir Thomas Munro, Selections from his writings and other official Writings*, 2 Volumes, Madras.

7. Burnel, 1888, *The Devil Worship of the Tuluvas,* Published by R.C, Temple. Madras.

8. John Sturrock, *1894, Madras District Manuals, South Canara, 2 Volumes, Madras.*

9. H.A.Stuart, 1894, *South Kanara, Madras District Manual, 2 volumes*, Madras.

10. E Thurston, 1909, *Castes and Tribes of Sothern India,* Vol. V, Madras.

11. Thurston E., 1909, *Castes and Tribes of Southern India, Vol.V,*.Madras.

12. Edward P.Rice,1921, *A History of Canarese Literature,* Bombay.

13. Mores G.M, 1927, *Mangalore,A Historical Sketch*, Mangalore.

14. Wilks, 1930, *Historical Sketches of South India in an attempt to trace the history of Mysore,* Mysore.

15. B.A Saletore, 1934, *Political and Social Life in the Vijayanagar Empire,* Vol.I&II,Madras.

16. B.A Saletore, *1936, Ancient Karnataka,* Vol. I, *History of Tuluva, Poona.*

17. Karamkar(ed), 1936, *vijayanagara Centenary Commemoration* Volume, Dharwad.

18. K.A.Nilakanta Sastri ,1946, *Further sources of Vijayanagara History,* 3 Vols, Madras.

19. Sharada Raju,1947,*Economic condition of the Madras Presidency 1800-1850,* Madras.

20. Silva, 1952, *History of Christianity in Canara, Karwar.*

21. B.A Saletore *, 1956, Karnataka's Trans-Oceanic Contact, Dharwar.*

22. K.A.Nilakanta Sastri, *1966, A history of South India,Madras.*

23. Silva *, 1956 ,Mangalore,* Ankola.

24. Krishna Bhatt and others, (ed), 1957, Tenkanadu, Kasaragod.

25. Kirmani, *1957, The History of Hyder Shah and Tippu Sultan. Mysore.*

Works in Kannada:

1. ಮನ್ನಾರ್, 1886, ಪಾಡ್ದನೋಳು, ಮಂಗಳೂರು.

2. ಗಣಪತಿ ರಾವ್ ಐಗಳ್, 1923, ದಕ್ಷಿಣಕನ್ನಡ ಜಿಲ್ಲಿಯ ಪ್ರಾಚೀನ ಇತಿಹಾಸ, ಮಂಗಳೂರು.

3. ಎಸ್. ಕೃಷ್ಣ ಭಟ್, 1947, ತೆಂಕನಾಡು, ಕಾಸರಗೋಡು.

4. ಕೆ.ಕೆ.ಕುಡ್ವ, 1948, ದಕ್ಷಿಣ ಕನ್ನಡ ಇತಿಹಾಸ, ಮಂಗಳೂರು.

5. ಚಂದ್ರಮ ಕವಿ, 1951, ಕಾರ್ಕಳ ಗೋಮಟೇಶ್ವರ ಚರಿತ್ರೆ (ಈಡಿ), ಚಂದ್ರಶೇಖರನ್, ಮದ್ರಾಸ್.

6. ಗುರುರಾಜ ಭಟ್, 1963, ತುಳುನಾಡು, ಉಡುಪಿ

7. ಗುರುರಾಜ ಭಟ್, 1966, ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು, ಉಡುಪಿ.

8. ಕೆ.ವಿ. ರಮೇಶ್, 1968, ತುಳುನಾಡಿನ, ಇತಿಹಾಸ, ಉಡುಪಿ.

9. ಕೆ.ವಿ. ರಮೇಶ್, 1968, ತುಳುನಾಡಿನ, ಇತಿಹಾಸ, ಉಡುಪಿ.

10. ಚಿದಾನಂದ ಮೂರ್ತಿ, 1970, ಸಂಶೋಧನಾ ತರಂಗ, ಬೆಂಗಳೂರು.

11. ಬಿ.ಆರ್. ಹೀರೇಮಠ್, 1972, ದಕ್ಷಿಣ ಕನ್ನಡದ ತುಳುವರು, ಬೆಂಗಳೂರು.

12. ಚಿದಾನಂದ ಮೂರ್ತಿ, 1979, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಾಯನ, ಮೈಸೂರು.

13. ವಿವೇಕ ರೈ, 1980, ತುಳು ಅಧ್ಯಾಯನ, ಮಂಗಳೂರು.

14. ವಸಂತ ಮಾಧವ, 1982, ಸಾಹಿತ್ಯ ದೀಪಿಕ, ಸುರತ್ಕಲ್.

15. ಚಿನ್ನಪ್ಪ ಗೌಡ (ಸಂ), 1989, ಪನಿಯಾರ, ಮಂಗಳೂರು.

16. ಮೋಹನ್ ಕೃಷ್ಣ ರೈ, 1999, ತುಳು ಸಂಸ್ಕೃತಿ, ಹಂಪಿ.

ಪ್ರೊ. ನಿರ್ಮಲ್ ರಾಜು
ಮಾರ್ಗದರ್ಶಕರು

ಚಂದ್ರಕಾಂತ್ ಭಟ್
ಸಂಶೋಧಕರು